ಕರ್ನಾಟಕ ಸರ್ಕಾರ

ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 560 012

ಸಂಖ್ಯೆ: ಪಪೂಶಿಇ/ದ್ವಿ.ಪಿಯುಪರೀಕ್ಷೆ/2012-13 ದಿನಾಂಕ 20-03-2013

## ಪತ್ರಿಕಾ ಪ್ರಕಟಣೆ

ದಿನಾಂಕ 18-03-2013ರಂದು ನಡೆದ ದ್ವಿತೀಯ ಪಿಯುಸಿ ಗಣಿತ ವಿಷಯದ ಪರೀಕ್ಷೆಗೆ ಸಂಬಂಧಿಸಿದಂತೆ 20 ಅಂಕಗಳನ್ನು ಗ್ರೇಸ್ ನೀಡುವ ಅಥವಾ ಮರು ಪರೀಕ್ಷೆ ನಡೆಸುವ ಕುರಿತಂತೆ ವಿದ್ಯಾರ್ಥಿಗಳಿಗೆ/ಸಾರ್ವಜನಿಕರಿಗೆ ಸುಳ್ಳು ಎಸ್.ಎಂ.ಎಸ್. ಸಂದೇಶಗಳನ್ನು ನೀಡಿ ಈ ಬಗ್ಗೆ ಇಲಾಖೆಯ ಸಹಾಯವಾಣಿ ಸಂಖ್ಯೆ: 23468740, 23468741ಗಳಿಗೆ ಕರೆಗಳ ಮೂಲಕ ದೂರು ನೀಡುವಂತೆ ನಿರ್ದೇಶನಾಲಯದಿಂದ ಯಾವುದೇ ರೀತಿಯ ಸೂಚನೆಗಳನ್ನು ಹೊರಡಿಸಲಾಗಿರುವುದಿಲ್ಲ. ಆದ್ದರಿಂದ ಇಂತಹ ಸುಳ್ಳು ಸಂದೇಶಗಳಿಗೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಕಿವಿಗೊಡಬಾರದೆಂದು ವಿನಂತಿಸಲಾಗಿದೆ.

ದಿನಾಂಕ 20-03-2013ರಂದು ಭೌತಶಾಸ್ತ್ರ ವಿಷಯದ ಪರೀಕ್ಷೆಗೆ ಒಟ್ಟು 1,60,770 ವಿದ್ಯಾರ್ಥಿಗಳು 891 ಪರೀಕ್ಷಾ ಕೇಂದ್ರಗಳಲ್ಲಿ, ಮನಶಾಸ್ತ್ರ ವಿಷಯದ ಪರೀಕ್ಷೆಗೆ 1810 ವಿದ್ಯಾರ್ಥಿಗಳು 66 ಪರೀಕ್ಷಾ ಕೇಂದ್ರಗಳಲ್ಲಿ, ಕರ್ನಾಟಕ ಸಂಗೀತ ವಿಷಯದ ಪರೀಕ್ಷೆಗೆ 2 ವಿದ್ಯಾರ್ಥಿಗಳು 1 ಪರೀಕ್ಷಾ ಕೇಂದ್ರದಲ್ಲಿ ಹಾಗು ಹಿಂದೂಸ್ಥಾನಿ ಸಂಗೀತ ವಿಷಯದ ಪರೀಕ್ಷೆಗೆ 210 ವಿದ್ಯಾರ್ಥಿಗಳು 15 ಪರೀಕ್ಷಾ ಕೇಂದ್ರಗಳಲ್ಲಿ ಹಾಜರಾಗಿರುತ್ತಾರೆ.

ಬಿಜಾಪುರ ಜಿಲ್ಲೆಯಲ್ಲಿ-10, ಬೆಳಗಾಂ ಜಿಲ್ಲೆಯಲ್ಲಿ-2, ಯಾದಗಿರಿ ಜಿಲ್ಲೆಯಲ್ಲಿ-2, ತುಮಕೂರು ಜಿಲ್ಲೆಯಲ್ಲಿ-2, ಧಾರವಾಡ, ಗುಲ್ಬರ್ಗಾ, ಹಾಸನ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ಬೀದರ್ ಜಿಲ್ಲೆಯಲ್ಲಿ ತಲಾ ಒಂದು ವಿದ್ಯಾರ್ಥಿಗಳು ಪರೀಕ್ಷಾ ದುರಾಚರಣೆಯಲ್ಲಿ ತೊಡಗಿದ್ದನ್ನು ಪತ್ತೆಹಚ್ಚಿ ಒಟ್ಟು 22 ವಿದ್ಯಾರ್ಥಿಗಳನ್ನು ಡಿಬಾರ್ ಮಾಡಲಾಗಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ